**ದಿನಾಂಕ: 12.08.2026.**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ.ಡಬ್ಲ್ಯೂ - 5**

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಸಿ.ಎಸ್.ಕೆ., ರವರಿಂದಃ</u>

ನಿ.ಪಿ.1 ದೂರಿನಲ್ಲಿ ನನ್ನ ರುಜು ಇರುವುದಿಲ್ಲ. ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಕೇಸಿನ ಬಗ್ಗೆ ನನಗೆ ಏನೂ ಗೊತ್ತಿಲ್ಲದೇ ಇದ್ದರೂ ಸಹಿತ ಚಾಸಾ.1ರವರ ಜೊತೆ ಶಾಮೀಲಾಗಿ ಅವರ ಮಾತು ಕೇಳಿಕೊಂಡು ನಾನು ಸಂಭಾಷಣೆ ರೆಕಾರ್ಡ್ ಮಾಡಿಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿ.ಪಿ.1 ದೂರನ್ನು ಬರೆದುಕೊಟ್ಟಿಲ್ಲದೇ ಇದ್ದರೂ ಸಹಿತ ಬರೆದುಕೊಟ್ಟಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಮಾವನಿಗೆ ಮೊಬೈಲ್ ಆಪರೇಟ್ ಮಾಡುವುದು ಗೊತ್ತಿಲ್ಲದೇ ಇರುವುದರಿಂದ ಅದನ್ನು ಅವರು ಕೇಳಿದಾಗ ನಾನು ಆಪರೇಟ್ ಮಾಡಿಕೊಟ್ಟಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅದೇ ಪ್ರಕಾರ ಚನ್ನಪಟ್ಟಣದಲ್ಲಿಯೂ 1ನೇ ಆರೋಪಿಯ ಆಫೀಸ್ ನಲ್ಲಿ ನಾನು ನನ್ನ ಮಾವನಿಗೆ ಅಲ್ಲಿ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡುವ ಸಲುವಾಗಿ ಮೊಬೈಲ್ ನ್ನು ಆಪರೇಟ್ ಮಾಡಿಕೊಟ್ಟಿದ್ದೇನೆ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯ ಆಫೀಸ್ ನಿಂದ ನನ್ನ ಮಾವ ಹೊರಗಡೆ ಬಂದಾಗ ರೆಕಾರ್ಡ್ ರನ್ನಿಂಗ್ ನಲ್ಲಿ ಇತ್ತು ಮತ್ತು ಆಫೀಸ್ ಒಳಗಡೆ ನಡೆದ ಸಂಭಾಷಣೆ ರೆಕಾರ್ಡ್ ಆಗಿತ್ತು ಅಂತ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ರೆಕಾರ್ಡ್ ನ್ನು ದಿಃ21.11.2012ರಂದು ರೆಕಾರ್ಡ್ ಆಗಿಲ್ಲದಿದ್ದರೂ ಸಹಿತ ರೆಕಾರ್ಡ್ ಆಗಿರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಂತರ ನಾನು ಆ ಆಫೀಸ್ ನಿಂದ ನನ್ನನ್ನು ನನ್ನ ಮಾವ ಲೋಕಾಯುಕ್ತ ಕಚೇರಿಗೆ ಕರೆದಕುಕೊಂಡು ಹೋಗಿದ್ದರು, ನನ್ನ ಮಾವನಿಗೆ ಸರಿಯಾಗಿ ಬರೆಯಲು ಬರದೇ ಇದ್ದುದ್ದರಿಂದ ದೂರನ್ನು ಬರೆಸುವುದಕ್ಕೆ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋದರು, ನಾನು ದೂರನ್ನು ಬರೆದುಕೊಟ್ಟಿರುತ್ತೇನೆ ಅಂತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಮಾವ ಕಾಂಟ್ರ್ಯಾಕ್ಟ್ ಕೆಲಸ ಮಾಡುವ ಸಲುವಾಗಿ ಲೈಸೆನ್ಸ್ ಪಡೆದುಕೊಂಡಿಲ್ಲ ಎನ್ನುವುದು ನಿಜ. ನಾನು ಪೊಲೀಸರ ಮುಂದೆ ಯಾವುದೇ ರೀತಿಯ ಹೇಳಿಕೆ ಕೊಟ್ಟಿಲ್ಲ ಎನ್ನುವುದು ನಿಜ. ನನ್ನ ಸೋದರಮಾವನ ಜೊತೆ ಶಾಮೀಲಾಗಿ ಈ ಕೇಸಿನ ಬಗ್ಗ ನನಗೆ ಏನೂ ಗೊತ್ತಿಲ್ಲದೇ ಇದ್ದರೂ ಸಹಿತ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

**(ಎಂ.ಹೆಚ್. ಅಣ್ಣಯ್ಯನವರ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**